**ದಿನಾಂಕಃ 18.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ **ವಾದಿ ಪರ** ಶ್ರೀ. ಎಂ.ಡಿ **ವಕೀಲರಿಂದಃ**

ನನ್ನ ತಂದೆಯು ಸಾರ್ವಜನಿಕ ಆಸ್ಪತ್ರೆ, ಟಿ.ನರಸೀಪುರದಲ್ಲಿ ದಿನಾಂಕ 24.11.2015 ರಂದು ಮರಣ ಹೊಂದಿರುತ್ತಾರೆ ಎಂದು ಮರಣ ಪ್ರಮಾಣ ಪತ್ರದಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ನನ್ನ ತಂದೆಯನ್ನು ಅನಾರೋಗ್ಯದ ಕಾರಣ ಸಾರ್ವಜನಿಕ ಆಸ್ಪತ್ರೆ, ಟಿ.ನರಸೀಪುರದಲ್ಲಿ ಒಳರೋಗಿಯಾಗಿ ಸೇರಿಸಿದ್ದೆನು. ನನ್ನ ತಂದೆಯು ಸಾರ್ವಜನಿಕ ಆಸ್ಪತ್ರೆ, ಟಿ.ನರಸೀಪುರದಲ್ಲಿ ಒಳರೋಗಿಯಾಗಿ 2 ದಿನಗಳ ಕಾಲ ಇದ್ದರು. ನನ್ನ ತಂದೆಗೆ ಅಸ್ಥಮ ಖಾಯಿಲೆ ಇತ್ತು ಮತ್ತು ಆಗಾಗ್ಗೆ ಎದೆನೋವು ಬರುತ್ತಿತ್ತು. ನನ್ನ ತಂದೆಯು ಮೈಸೂರಿನ ಜೆ ಎಸ್ ಎಸ್ ಆಸ್ಪತ್ರೆಗೆ ಒಬ್ಬರೇ ಹೋಗಿ ಬರುತ್ತಿದ್ದರು. ಕೆಲವೊಂದು ಬಾರಿ ನನಗೆ ಯಾವುದೇ ಕೆಲಸ ಕಾರ್ಯ ಇಲ್ಲದೇ ಇದ್ದಾಗ ನಾನು ಸಹ ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೆನು. ನನ್ನ ತಂದೆಯು ಮರಣ ಹೊಂದುವ 4-5 ತಿಂಗಳ ಪೂರ್ವದಲ್ಲಿ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಸುಮಾರು 15 ವರ್ಷಗಳಿಂದ ನನ್ನ ತಂದೆಯು ನನ್ನ ಜೊತೆಯಲ್ಲಿಯೇ ವಾಸಿಸುತ್ತಿದ್ದರು. ನನ್ನ ತಂದೆಗೆ ವಯಸ್ಸಾದ ಕಾರಣದಿಂದ ಅವರನ್ನು ಯಾರಾದರೂ ಜೊತೆಯಲ್ಲಿ ಕರೆದುಕೊಂಡು ಹೋಗಿ ಬರಬೇಕಾಗಿತ್ತು ಎಂದರೆ ಸರಿಯಲ್ಲ.

ನಿಡಿ-2 ರ ಮರಣ ಶಾಸನವನ್ನು ನನ್ನ ತಂದೆಯು ಅವರು ಮರಣ ಹೊಂದುವ ಒಂದುವರೆ ತಿಂಗಳ ಮೊದಲು ಬರೆದಿದ್ದರು. ಸದರಿ ನಿಡಿ-2 ರ ಮರಣ ಶಾಸನವನ್ನು ನನ್ನ ತಂದೆಯು ಯಾವಾಗ ಬರೆದಿದ್ದರು ಎಂದು ನನಗೆ ಗೊತ್ತಿರಲಿಲ್ಲ. ನಿಡಿ-2 ರ ಮರಣ ಶಾಸನ ಬರೆಯಲು ನನ್ನ ತಂದೆಯನ್ನು ಉಪ ನೊಂದಣಾಧಿಕಾರಿಗಳ ಕಛೇರಿಗೆ ಯಾರು ಕರೆದುಕೊಂಡು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ನಿಡಿ-2 ರ ಮರಣ ಶಾಸನವನ್ನು ಬರೆಸಲು ನಾನು ಸ್ವತಃ ನನ್ನ ತಂದೆಯನ್ನು ಮತ್ತು ಸಾಕ್ಷಿದಾರರನ್ನು ಉಪ ನೊಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿದ್ದೆನು ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ಸಹಿ ಮಾಡಿರುವ ಸಾಕ್ಷಿದಾರರಾದ ಕೆ.ಎಸ್.ಮಹದೇವಸ್ವಾಮಿರವರು ನನಗೆ ಪರಿಚಿತರು ಮತ್ತು ಸಂಬಂಧಿಕರು ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಇತ್ತೀಚೆಗೆ ಕೆ.ಎಸ್.ಮಹದೇವಸ್ವಾಮಿರವರ ಪರಿಚಯವಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಹೆಸರಿಗೆ ದಾವಾ ಅನುಸೂಚಿ ಸ್ವತ್ತಿನ ಖಾತೆಯನ್ನು ಬದಲಾವಣೆ ಮಾಡಿಸಿಕೊಳ್ಳುವ ಸಂಧರ್ಭದಲ್ಲಿ ನಮ್ಮ ಮನೆಯಲ್ಲಿ ನಿಡಿ-2 ರ ಮರಣ ಶಾಸನ ಪತ್ರ ಸಿಕ್ಕಿರುತ್ತದೆ. ನಂತರ ಸದರಿ ಮರಣ ಶಾಸನ ಪತ್ರವನ್ನು ಬೇರೆಯವರ ಕೈಯಲ್ಲಿ ಓದಿಸಿದಾಗ ನನ್ನ ತಂದೆಯು

ನನ್ನ ಹೆಸರಿಗೆ ಮರಣ ಶಾಸನ ಪತ್ರ ಬರೆದಿರುವ ವಿಚಾರ ನನಗೆ ತಿಳಿಯಿತು. ನಂತರ ನಾನು ಕೆ.ಎಸ್.ಮಹದೇವಸ್ವಾಮಿರವರನ್ನು ಭೇಟಿ ಮಾಡಿದಾಗ ಸದರಿಯವರು ನಿಡಿ-2ರ ಮರಣ ಶಾಸನ ಪತ್ರದ ಬಗ್ಗೆ ತಿಳಿಸಿದರು. ಸದರಿ ವಿಚಾರವನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ.

ದಿನಾಂಕ 06.10.2015ರಂದು ನಾನು ನನ್ನ ತಂದೆಯೊಂದಿಗೆ ಟಿ.ನರಸೀಪುರದ ಉಪ ನೊಂದಣಾಧಿಕಾರಿಗಳ ಕಛೇರಿಗೆ ಹೋಗಿದ್ದೆನು ಎಂದರೆ ಸರಿಯಲ್ಲ. ಸದರಿ ದಿನ ನಿಡಿ-2ರಲ್ಲಿ ಸಹಿ ಮಾಡಿರುವ ಸಾಕ್ಷಿದಾರರನ್ನು ಸಹ ನಾನು ಉಪ ನೊಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿದ್ದೆನು ಎಂದರೆ ಸರಿಯಲ್ಲ. ನನ್ನ ತಂದೆಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಅಸಮರ್ಥರಾಗಿದ್ದ ಸಂಧರ್ಭದಲ್ಲಿ ಸದರಿ ಅಸಮರ್ಥತೆಯನ್ನು ದುರುಪಯೋಗಪಡಿಸಿಕೊಂಡು ವಾದಿಗಳ ಆಸ್ತಿಗಳನ್ನು ಸೇರಿಸಿ ನನ್ನ ತಂದೆಯ ಕೈಯಿಂದ ಕಾನೂನು ಬಾಹಿರವಾಗಿ ನಿಡಿ-2ರ ಮರಣ ಶಾಸನ ಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-2ರ ಮರಣ ಶಾಸನ ನೊಂದಣಿ ಆದ ನಂತರ ಉಪ ನೊಂದಣಾಧಿಕಾರಿಗಳ ಕಛೇರಿಯ ಪುಸ್ತಕದಲ್ಲಿ ಯಾರು ಸಹಿ ಮಾಡಿ ಸದರಿ ಮೂಲ ಪ್ರತಿಯನ್ನು ತೆಗೆದುಕೊಂಡು ಹೋದರು ಎಂದು ನನಗೆ ನೆನಪಿಲ್ಲ.

ನನ್ನ ತಂದೆಯು ವ್ಯವಸಾಯಗಾರ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ನನ್ನ ತಂದೆಯು ವ್ಯವಸಾಯದ ಜೊತೆಗೆ ದನಕರುಗಳನ್ನು ಮಾರಾಟ ಮಾಡುವ ದಲ್ಲಾಳಿ ವ್ಯಾಪಾರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿರುವುದಿಲ್ಲ. ನನ್ನ ತಂದೆಯು ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳಿಂದ ಸಂಪಾದಿಸಿದ ಆದಾಯದಿಂದ ದಾವಾ ಅನುಸೂಚಿ ಸ್ವತ್ತುಗಳನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ಹಾಗಾಗಿ ದಾವಾ ಅನುಸೂಚಿ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದರಿಂದ ನನ್ನ ತಂದೆಯು ಅವರ ಜೀವಿತಾವಧಿಯಲ್ಲಿ ನಿಪಿ-6ರ ಪಂಚಾಯಿತಿ ಪಾಲುಪಾರಿಕತ್ ಪ್ರಕಾರ ತಮ್ಮ ಮತ್ತು ತಮ್ಮ ಮಕ್ಕಳ ನಡುವೆ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿದ್ದರು ಎಂದರೆ ಸರಿಯಲ್ಲ. ನಿಪಿ-6ರ ಪಂಚಾಯಿತಿ ಪಾಲುಪಾರಿಕತ್ ದಾಖಲಾತಿಗೆ ನಾನು, ನನ್ನ ಸಹೋದರ ಮತ್ತು ನನ್ನ ತಂದೆಯು ಸಹಿ ಮಾಡಿದ್ದರೂ ಸಹ ದುರುದ್ದೇಶದಿಂದ ದಾವಾ ಅನುಸೂಚಿ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಸದರಿ ಸಹಿ ತನ್ನದಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯು ಮರಣ ಹೊಂದಿದ ನಂತರ ವಾದಿಯು ನಿಪಿ-6ರ ವಿಭಾಗ ಪತ್ರದಂತೆ ದಾವಾ ಅನುಸೂಚಿ ಸ್ವತ್ತುಗಳಲ್ಲಿ ಮಾಲೀಕರಾಗಿ ಸ್ವಾಧೀನತೆ ಹೊಂದಿದ್ದಾರೆ ಎಂದರೆ ಸರಿಯಲ್ಲ. ವಾದಿಗಳಿಗೆ ಸೇರಿದ ದಾವಾ ಅನುಸೂಚಿ ಸ್ವತ್ತುಗಳನ್ನು ಲಪಟಾಯಿಸುವ

ಉದ್ದೇಶದಿಂದ ನಿಡಿ-2 ರ ಮರಣ ಶಾಸನ ಪತ್ರವನ್ನು ಸೃಷ್ಟಿ ಮಾಡಿಕೊಂಡು ವಾದಿಗೆ ತಿಳಿಯದಂತೆ ದಾವಾ ಅನುಸೂಚಿ ಸ್ವತ್ತುಗಳ ಖಾತೆಗಳನ್ನು ನನ್ನ ಹೆಸರಿಗೆ ಬದಲಾಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-6 ರ ವಿಭಾಗ ಪತ್ರದಂತೆ 2007 ರಲ್ಲಿಯೇ ನಮ್ಮ ಕುಟುಂಬದ ಆಸ್ತಿಗಳು ವಿಭಾಗವಾಗಿದ್ದರೂ ಸಹ ವಾದಿಗೆ ಮೋಸ ಮಾಡುವ ಉದ್ದೇಶಂದ 2015 ರಲ್ಲಿ ನಿಡಿ-2 ರ ಮರಣ ಶಾಸನ ಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಗೆ ನಿಡಿ-2 ರ ಮರಣ ಶಾಸನ ಪತ್ರ ಬರೆಯುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ನಿಡಿ-2 ರ ಮರಣ ಶಾಸನ ಪತ್ರವನ್ನು ನಾನೇ ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಡಿ-2 ರ ಮರಣ ಶಾಸನ ಪತ್ರವನ್ನು ನಾನೇ ಸೃಷ್ಟಿ ಮಾಡಿ ಸಲ್ಲಿಸಿರುವ ದಾಖಲಾತಿಯಾಗಿರುವುದರಿಂದ ದಾವಾ ಅನುಸೂಚಿ ಸ್ವತ್ತುಗಳ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ದಾವಾ ಅನುಸೂಚಿ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-2 ರ ಮರಣ ಶಾಸನ ಪತ್ರಕ್ಕೆ ಕಾನೂನಿನಡಿಯಲ್ಲಿ ಯಾವುದೇ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಡಿ-3, 5 ಮತ್ತು 6 ರ ದಾಖಲಾತಿಗಳನ್ನು ದಾವಾ ಅನುಸೂಚಿ ಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ಸೃಷ್ಟಿ ಮಾಡಿ ಸಲ್ಲಿಸಿದ ದಾಖಲಾತಿಗಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ